# ವಾರ್ತಾ ವಿಶ್ಲೇಷಣೆ

## ವಿಶ್ವನಾಗರಿಕತೆಗೆ ಭಾರತದ ಕೊಡುಗೆ

ಭಾರತದ ಐತಿಹಾಸಿಕ ಶ್ರೀಮಂತಿಕೆ ಪಾಶ್ಚಾತ್ಯ ಪ್ರಜ್ಞಾವಂತರ ಮನ್ನಣೆಗೆ ಹೆಚ್ಚು ಹೆಚ್ಚು ಪಾತ್ರವಾಗುತ್ತಿರುವುದು ಕುತೂಹಲ ಕೆರಳಿಸುವ ಸಂಗತಿಯಾಗಿದೆ. ಇತ್ತೀಚೆಗೆ ಕೊಯಮತ್ತೂರಿನ ಅವಿನಾಶಿಲಿಂಗಂ ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಲಾಗಿದ್ದ "ಪಶ್ಚಿಮದಲ್ಲಿ ಭಾರತದ ಬಗೆಗಿನ ಪರಿಕಲ್ಪನೆ" ಎಂಬ ವಿಶೇಷ ಉಪನ್ಯಾಸವನ್ನು ನೀಡಿದ ಖ್ಯಾತ ಇಂಡಾಲಜಿಸ್ಟ್, ಡಾ.ಕೊಯೆನ್‌ರಾಡ್ ಎಲ್ಸ್ಟ್ (Koenraad Elst) ರವರು ಸಾರ್ವತ್ರಿಕ ವಿಶ್ವಸಂಸ್ಕೃತಿಗೆ ಭಾರತದ ಕೊಡುಗೆ ಅಪಾರವಾದುದು ಎಂದು ಹೇಳುತ್ತ, ಮುಂಬರುವ ದಿನಗಳಲ್ಲಿ ಪ್ರತಿಯೊಂದು ಸಂಸ್ಕೃತಿಯ ಉತ್ತಮ ಅಂಶಗಳನ್ನು ಒಳಗೊಂಡ ಒಂದು ಸರ್ವಮಾನ್ಯ ನಾಗರಿಕತೆ ಅಸ್ತಿತ್ವಕ್ಕೆ ಬರಲಿದೆ ಎಂದರು. ಆ ನಾಗರಿಕತೆಯಲ್ಲಿ ಮೌಲಿಕವಾದದ್ದೆಲ್ಲವೂ ಭಾರತೀಯ ಮೂಲದ್ದೇ ಆಗಿರುತ್ತದೆ ಎಂಬುದು ಅವರ ಖಚಿತವಾದ ಅಭಿಪ್ರಾಯ.

ಇತ್ತೀಚೆಗೆ ಯೋಗ ಮತ್ತು ಸಸ್ಯಾಹಾರದ ಬಗ್ಗೆ ಪಾಶ್ಚಾತ್ಯರು ತೋರುತ್ತಿರುವ ವಿಶೇಷ ಆಸಕ್ತಿ ಇದರ ಕುರುಹು ಎನ್ನಬಹುದೆ? ಏನೇ ಆಗಲಿ ಎಂತಹ ಭಾರತೀಯನೂ ಹೆಮ್ಮೆ ಪಡಬೇಕಾದ ಒಂದು ಉದಾತ್ತವಾದ ಸಾಂಸ್ಕೃತಿಕ-ಆಧ್ಯಾತ್ಮಿಕ ಸಂಪತ್ತು ಈ ದೇಶದಲ್ಲಿದೆ. ವಿಶ್ವದ ಬಗೆಗೆ, ಬದುಕಿನ ಬಗೆಗೆ ಸನಾತನ ಧರ್ಮದಲ್ಲಿನ ಪ್ರಗಲ್ಭ ಚಿಂತನೆಗಳು ಜಗತ್ತಿನ ಪ್ರಜ್ಞಾವಂತರ ಗಮನ ಸೆಳೆಯುವುದರಲ್ಲಿ ಸಂದೇಹವಿಲ್ಲ. ವರ್ತಮಾನದಲ್ಲಿ ಕಂಪ್ಯೂಟರ್ ಕ್ಷೇತ್ರದಲ್ಲಿ ಭಾರತೀಯರು ತೋರಿರುವ ಅಸಾಧಾರಣ ಬುದ್ಧಿಮತ್ತೆ ಅನೇಕ ರಾಷ್ಟ್ರಗಳನ್ನು ಹುಬ್ಬೇರಿಸುವಂತೆ ಮಾಡಿದೆ. ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸುವ ಉತ್ಸಾಹ ಭಾರತೀಯ ಪ್ರತಿಭಾವಂತ ಉದ್ಯಮಿಗಳಲ್ಲಿ ಕಂಡುಬರುತ್ತಿದೆ.

ಡಾ. ಎಲ್ಸ್ಟ್‌ರವರೆನ್ನುವಂತೆ, ಈ ಮುಂಚೆ ಭಾರತವನ್ನು ಕಿತ್ತು ತಿನ್ನುತ್ತಿರುವ ಬಡತನ ದಾರಿದ್ರ್ಯ ನೋವುಗಳೊಂದಿಗೆ ಮಾತ್ರ ಗುರುತಿಸಲಾಗುತ್ತಿತ್ತು. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇವುಗಳ ನಿರ್ಮೂಲನ ಆದ್ಯತೆ ಪಡೆಯಬೇಕಾಗಿದೆ. ಸ್ವಾತಂತ್ರ್ಯದ ನಂತರ ಭಾರತದ ನಿರಂತರ ಅಭಿವೃದ್ಧಿಶೀಲ ಪ್ರಯತ್ನಗಳೆಲ್ಲಕ್ಕೂ ಕೆಲವು ಸಾಮಾಜಿಕ ಅನಿಷ್ಟಗಳು ಗ್ರಹಣ ಹಿಡಿಸಿವೆ. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಮತ್ತು ದುರ್ಬಲ ವರ್ಗದವರಿಗೆ ಬದುಕಿನ ಮೂಲಭೂತ ಸೌಲಭ್ಯಗಳು ದೊರಕದಿರುವುದು, ವಿದ್ಯಾವಂತ ವರ್ಗದಲ್ಲಿ ವ್ಯಾಪಕವಾಗಿರುವ ಸಾಮಾಜಿಕ ಕಾಳಜಿಯ ಅಭಾವ ಇವೇ ಮುಂತಾದುವು ಯಾವುದೇ ರಾಷ್ಟ್ರಕ್ಕೂ ಶೋಭೆ ತರುವಂತಹದ್ದಲ್ಲ. ಈ ಸಮಸ್ಯೆಗಳನ್ನು ಗಂಭೀರವಾಗಿ ತೆಗೆದುಕೊಂಡು ಎದುರಿಸಿದ್ದೇ ಆದರೆ ಭಾರತೀಯ ಸಂಸ್ಕೃತಿಯಲ್ಲಿನ ಅಂತಸ್ಸತ್ವದ ಮಹತಿ ಬೆಳಗುವಂತಾಗಿ ಭಾರತಕ್ಕೆ ಎಂದೆಂದಿಗೂ ಸಲ್ಲುವ "ಯೋಗಭೂಮಿ" "ಜ್ಞಾನಭೂಮಿ" ಎಂಬ ಹೆಗ್ಗಳಿಕೆ ಅರ್ಥಪೂರ್ಣವಾಗುತ್ತದೆ.

◆

## ಮತಾಂತರದ ಅವಾಂತರ

ನಮ್ಮ ದೇಶದ ಇತಿಹಾಸವನ್ನು ತಿರುಚಿ, ಸುಳ್ಳುಕಥೆಗಳನ್ನು ಸೃಷ್ಟಿಸಿ ಭಾರತೀಯರಿಗೆ ಕೀಳರಿಮೆ ಮೂಡಿಸುವಂತಹ ಇತಿಹಾಸ ಗ್ರಂಥಗಳನ್ನು ಬರೆದ ಪಾಶ್ಚಾತ್ಯ ಲೇಖಕರಂತೂ ಹೇರಳವಾಗಿದ್ದಾರೆ. ಆದರೆ ಆ ಸುಳ್ಳುಕಥೆಗಳನ್ನು ಆಧರಿಸಿ ಇತಿಹಾಸದಲ್ಲಿ ಎಂದೋ ಆದ ಕ್ಷುಲ್ಲಕ ವಿಷಯಗಳನ್ನು ಎತ್ತಿಕೊಂಡು, ಈ ದೇಶದಲ್ಲಿದ್ದ ವಂಚಕರನ್ನೂ, ದ್ರೋಹಿಗಳನ್ನೂ ಹುತಾತ್ಮರ ಪಟ್ಟಕ್ಕೇರಿಸುವ ತವಕ ಮತಾಂಧರಿಗೆ ಮಾತ್ರ ಸಾಧ್ಯ. ತ್ರಿಚೂರಿನಲ್ಲಿ ನಡೆದ ಭಾರತೀಯ ಕ್ಯಾಥೋಲಿಕ್ ಬಿಷಪ್‌ಗಳ ವಾರ್ಷಿಕ ಸಮಾವೇಶದಲ್ಲಿ (Catholic Bishops Conference of India, CBCI) ಈ ರೀತಿಯ ಒಬ್ಬ ವಂಚಕನನ್ನು ಹುತಾತ್ಮನನ್ನಾಗಿ ಘೋಷಿಸಬೇಕೆಂಬ ಶಿಫಾರಸನ್ನು ಸರ್ವಾನುಮತವಾಗಿ ಅಂಗೀಕರಿಸಿ ನಿರ್ಣಯ ಹೊರಡಿಸಿರುವುದು ಅಪಾಯಕಾರಿ ಬೆಳವಣಿಗೆಗಳಲ್ಲಿ ಒಂದಾಗಿದೆ. ಈ ನಿರ್ಣಯಕ್ಕೆ ಪ್ರೇರಕವಾಗಿದೆ ಎನ್ನಲಾದ ಮಾಹಿತಿಯನ್ನು ಇವರು ಪಡೆದಿರುವುದು ತಾನು ಇತಿಹಾಸಜ್ಞ ಎಂದು ಕರೆದುಕೊಂಡಿರುವ ಮೆಕೆನ್ಸಿ ಎಂಬ ಪಾಶ್ಚಾತ್ಯನೊಬ್ಬನು ಸೃಷ್ಟಿಸಿದ ಸುಳ್ಳು ಕಥೆ. ಈ ಪಾಶ್ಚಾತ್ಯನ ಪ್ರಕಾರ ೧೮ನೇ ಶತಮಾನದಲ್ಲಿ ತಿರುವಾಂಕೂರಿನ ದೇವಾಶಯಂ ಪಿಳ್ಳೈ ಎಂಬ ಯೋಧನು ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಂಡಿದ್ದೇ ಅವನ ಕೊರಳಿಗೆ ಉರುಳಾಯಿತಂತೆ.

ಖ್ಯಾತ ಇತಿಹಾಸಜ್ಞ ಪ್ರೊ. ಶ್ರೀಧರ ಮೆನನ್ ಸಂಶೋಧನೆ ನಡೆಸಿ ತಮ್ಮ ಅಧ್ಯಯನದಲ್ಲಿ, 'ಮತಾಂತರಕ್ಕೆ ಸಂಬಂಧಿಸಿದಂತೆ ದಂಡನೆಯ ಮಾತು ಹಾಗಿರಲಿ, ಮತಾಂತರಗೊಂಡ ವ್ಯಕ್ತಿಯನ್ನು ಕೀಳಾಗಿ ನಡೆಸಿಕೊಂಡ ಒಂದೇ ಒಂದು ಪ್ರಸಂಗವೂ ತಿರುವಾಂಕೂರು ರಾಜ್ಯದ ಇತಿಹಾಸ ದಲ್ಲಿಲ್ಲ' ಎಂದು ತಿಳಿಸುತ್ತಾರೆ. ಹಾಗೆ ನೋಡಿದರೆ ತಿರುವಾಂಕೂರು ರಾಜ್ಯದ ಸೈನ್ಯದಲ್ಲಿ ದೇವಾಶಯಂ ಪಿಳ್ಳೈ ಎಂಬ ಹೆಸರಿನ ಯೋಧನೇ ಇರಲಿಲ್ಲ, ಎಂದು Indian Council of Historical Reseachನ ಛೇರ್‌ಮನ್ ಶ್ರೀನಾರಾಯಣ್‌ರವರು ಹೇಳುತ್ತಾರೆ. ತಿರುವಾಂಕೂರು ರಾಜ್ಯದ ಮ್ಯಾನುಯಲ್, ದೇವಾಶಯಂ ಪಿಳ್ಳೈ ಎಂಬ ಒಬ್ಬನು ರಾಜನ ಅರಮನೆಯಲ್ಲಿ ಕೆಲಸಕ್ಕಿದ್ದನೆಂದೂ ರಾಜ್ಯಾಡಳಿತದ ರಹಸ್ಯಗಳನ್ನು ಬಯಲು ಮಾಡಿದ್ದಕ್ಕಾಗಿ ಆತನಿಗೆ ಶಿಕ್ಷೆ ವಿಧಿಸಲಾಯಿತೆಂದೂ ತಿಳಿಸುತ್ತದೆ. ಈ ಮಾಹಿತಿಯನ್ನು ಮತಾಂತರಕ್ಕೆ ಸಂಬಂಧಿಸುವ ವಕ್ರ ಬುದ್ಧಿ ಪಾಶ್ಚಾತ್ಯನಾದ ಮೆಕೆನ್ಸಿಗಿದ್ದರೆ ಆಶ್ಚರ್ಯ ಪಡಬೇಕಿಲ್ಲ. ಆದರೆ ಆ ಮಾಹಿತಿಯನ್ನು ಸರಿಯಾಗಿ ಪರಿಶೀಲಿಸದೆ ಕ್ರೈಸ್ತಮತದ ಮುಖಂಡರು ಒಂದು ದೊಡ್ಡ ಸಮಾವೇಶದಲ್ಲಿ ಇಂತಹ ನಿರ್ಣಯವನ್ನು ಹೊರಡಿಸಿ ಭಾರತದ ಭವ್ಯವಾದ ಉದಾತ್ತ ಮನೋಭಾವದ ಪರಂಪರೆಗೆ ಮಸಿಬಳಿಯುವಂತಹ ಕೀಳುಮಟ್ಟಕ್ಕಿಳಿದಿರುವುದು ಶೋಚನೀಯ. ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದಾದ ಕ್ರೈಸ್ತಮತದ ಮುಖಂಡರಿಂದ ಈ ನಾಡಿನ ಜನ ಹೆಚ್ಚಿನದನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಅವರು ಮರೆಯಬಾರದು.

◆